ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 122-129
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ದೇವಾಡಿಗ ಸಮುದಾಯದ ಸಾಂಸ್ಕೃತಿಕ ವೈಶಿಷ್ಟ್ಯ ಮತ್ತು ವರ್ತಮಾನದ ಸವಾಲುಗಳು

**ಡಾ. ಜ್ಯೋತಿಪ್ರಿಯಾ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಡಾ.ಪಿ.ದಯಾನಂದ ಪೈ–ಪಿ. ಸತೀಶ ಪೈ ಸರಕಾರಿ ಪ್ರಥಮ ದರ್ಜೆ ಕಾಲೇಜು, ರಥಬೀದಿ, ಮಂಗಳೂರು.

***Abstract:***
*ಈ ಸಂಶೋಧನಾ ಲೇಖನವು ದೇವಾಡಿಗ ಸಮುದಾಯದ ವಿಶಿಷ್ಟ ಸಾಂಸ್ಕೃತಿಕ ಪರಂಪರೆ, ಸಾಮಾಜಿಕ ಜೀವನ ಮತ್ತು ಸಂಪ್ರದಾಯಗಳನ್ನು ಸಮಗ್ರವಾಗಿ ಅಧ್ಯಯನ ಮಾಡುತ್ತದೆ. ಸಮುದಾಯದ ಆಚರಣೆಗಳು, ಧಾರ್ಮಿಕ ನಂಬಿಕೆಗಳು, ಕಲೆ, ಭಾಷಾ ಬಳಕೆ, ಆಹಾರ ಪದ್ಧತಿ ಹಾಗೂ ಕುಟುಂಬ ವ್ಯವಸ್ಥೆಯಂತಹ ಸಾಂಸ್ಕೃತಿಕ ಅಂಶಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಆಧುನೀಕರಣ, ನಗರೀಕರಣ, ಜಾಗತೀಕರಣ ಮತ್ತು ಬದಲಾಗುತ್ತಿರುವ ಜೀವನಶೈಲಿಯಿಂದ ದೇವಾಡಿಗ ಸಮುದಾಯದ ಸಾಂಸ್ಕೃತಿಕ ಪರಂಪರೆಯಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಗುರುತಿಸಲಾಗಿದೆ. ಶಿಕ್ಷಣ, ಉದ್ಯೋಗ, ಆರ್ಥಿಕ ಪರಿಸ್ಥಿತಿ ಮತ್ತು ಯುವಜನತೆಯ ಮನೋಭಾವದಲ್ಲಿನ ಪರಿವರ್ತನೆಗಳು ಸಮುದಾಯದ ಸಾಂಸ್ಕೃತಿಕ ನಿರಂತರತೆಗೆ ಎದುರಾಗಿರುವ ಪ್ರಮುಖ ಸವಾಲುಗಳಾಗಿವೆ. ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಹಾಗೂ ಸಮುದಾಯದ ಸಾಮಾಜಿಕ–ಆರ್ಥಿಕ ಅಭಿವೃದ್ಧಿಗಾಗಿ ದಾಖಲಾತಿ, ಜಾಗೃತಿ ಮತ್ತು ಸಮುದಾಯದ ಸಕ್ರಿಯ ಪಾಲ್ಗೊಳ್ಳುವಿಕೆಯ ಅಗತ್ಯವನ್ನು ಅಧ್ಯಯನವು ಪ್ರತಿಪಾದಿಸುತ್ತದೆ.*

***Keywords:*** *ದೇವಾಡಿಗ ಸಮುದಾಯ, ಸಾಂಸ್ಕೃತಿಕ ವೈಶಿಷ್ಟ್ಯ, ಸಾಮಾಜಿಕ ಜೀವನ, ಆಧುನೀಕರಣ, ಸಾಂಸ್ಕೃತಿಕ ಸಂರಕ್ಷಣೆ*

## ಪೀಠಿಕೆ

ಯಾವುದೇ ಒಂದು ಸಮೂಹ, ಸಮುದಾಯ ಎಂಬುದಾಗಿ ಕರೆಯಬೇಕಾದರೆ ಅದು ನಿರ್ದಿಷ್ಟವಾದ ನೆಲೆಯನ್ನು ಹೊಂದಿರುತ್ತದೆ. ಪ್ರತಿಯೊಂದು ಸಮುದಾಯವು ತನ್ನದೇ ಆದ ವಿಶಿಷ್ಟ ಹೆಸರನ್ನು ಹೊಂದಿರುತ್ತದೆ. ಅದು ನಗರವಾಗಿರಲಿ, ಹಳ್ಳಿಯಾಗಿರಲಿ, ಆದಿವಾಸಿ ಸಮೂಹವಾಗಿರಲಿ, ದೇಶವಾಗಿರಲಿ, ಸಮುದಾಯಕ್ಕೊಂದು ನಿರ್ದಿಷ್ಟ ಹೆಸರಿದ್ದು, ಆ ಮೂಲಕವೇ ಗುರುತಿಸಲಾಗುತ್ತದೆ. ಸಮುದಾಯವು ಇದ್ದಕ್ಕಿದ್ದಂತೆಯೇ ಉದಯಿಸುವುದಿಲ್ಲ. ಪ್ರತಿಯೊಂದು ಸಮುದಾಯವು ಕಾಲಾನುಕ್ರಮದಲ್ಲಿ ತನ್ನದೇ ಆದ ರೂಢಿ–ಸಂಪ್ರದಾಯಗಳು, ಆಚರಣೆ–ನಂಬಿಕೆಗಳನ್ನು ಬೆಳೆಸಿಕೊಂಡು ತನ್ನ ಸದಸ್ಯರ ನಡತೆಗಳನ್ನು ನಿಯಂತ್ರಿಸುತ್ತದೆ. ಸಮುದಾಯವು ಗಾತ್ರದಲ್ಲಿ ಚಿಕ್ಕದಾಗಿರಬಹುದು ಅಥವಾ ದೊಡ್ಡದಾಗಿರಬಹುದು. ಅವು ಪ್ರದೇಶವನ್ನು ಅವಲಂಬಿಸಿ ನಿರ್ಧರಿತವಾಗುತ್ತವೆ. ಹಿಂದೆ ಸಮುದಾಯಗಳು ಸ್ವತಂತ್ರ ಮತ್ತು ಸ್ವಯಂ ಪರಿಪೂರ್ಣವಾಗಿದ್ದವು. ಜನರು ಮಿತವಾದ

***Please cite this article as:*** ಜ್ಯೋತಿಪ್ರಿಯಾ. (2026). ದೇವಾಡಿಗ ಸಮುದಾಯದ ಸಾಂಸ್ಕೃತಿಕ ವೈಶಿಷ್ಟ್ಯ ಮತ್ತು ವರ್ತಮಾನದ ಸವಾಲುಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(3), 122–129

ಬೇಡಿಕೆಗಳನ್ನು ಸಂಕುಚಿತ ಕ್ಷೇತ್ರದಲ್ಲಿಯೇ ಪೂರೈಸಿಕೊಂಡು ಸಂತೃಪ್ತ ಜೀವನವನ್ನು ಸಾಗಿಸುತ್ತಿದ್ದರು. ಆಧುನಿಕ ಸಂಕೀರ್ಣ ಸಮಾಜದಲ್ಲಿ ಬೇಡಿಕೆಗಳು ಹೆಚ್ಚಾಗಿದ್ದು, ಬೇಡಿಕೆಗಳನ್ನು ಪೂರೈಸುವ ಸಲುವಾಗಿ ಒಂದು ಸಮುದಾಯವು ಅನ್ಯ ಸಮುದಾಯಗಳ ಮೇಲೆ ಅವಲಂಬಿತವಾಗಿರುವುದು ಅನಿವಾರ್ಯವಾಗಿದೆ. ಹೀಗೆ ಯಾವುದೇ ಸಮುದಾಯವು ನಿರ್ಮಾಣವಾಗಬೇಕಾದರೆ ನಿರ್ದಿಷ್ಟ ಪ್ರದೇಶ ಮತ್ತು ಸಾಮುದಾಯಿಕ ಭಾವನೆಗಳು ಅವಶ್ಯಕವಾಗಿರುತ್ತದೆ.

ಕರ್ನಾಟಕದಲ್ಲಿ ಹಲವಾರು ಜಾತಿ ಸಮುದಾಯಗಳು ತಮ್ಮ ತತ್ವ ಸಿದ್ಧಾಂತಗಳ ಆಧಾರದ ಮೇಲೆ ಸಂಘಟಿತರಾಗಿದ್ದು, ಕೆಲವು ಜಾತಿಸಮುದಾಯಗಳು ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಹೆಚ್ಚು ಸಂಘಟಿತರಾಗಿದ್ದು ಸಮಾಜದಲ್ಲಿ ಗುರುತಿಸಿಕೊಂಡಿದ್ದರೆ, ಇನ್ನು ಕೆಲವು ಜಾತಿ ಸಮುದಾಯಗಳು ತಮ್ಮದೇ ಆದ ವಿಶಿಷ್ಟ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಪದ್ಧತಿ, ಸಂಪ್ರದಾಯ, ಆಚರಣೆಗಳ ಮೂಲಕ ಸಂಘಟಿತವಾಗಿವೆ. ಸಮಾಜದಲ್ಲಿ ಪ್ರಬಲವಾಗಿ ಗುರುತಿಸಿಕೊಳ್ಳದ ಅನೇಕ ಜಾತಿಸಮುದಾಯಗಳು ಇವೆ.

ಜಗತ್ತಿನಲ್ಲಿ ಸಾವಿರಾರು ಸಮುದಾಯ, ಜಾತಿ, ಜನಾಂಗ, ಬುಡಕಟ್ಟು ಸಮಾಜಗಳಿವೆ. ಅವುಗಳಲ್ಲಿನ ಒಂದೊಂದು ಸಮುದಾಯ, ಸಮಾಜಗಳ ಸ್ವರೂಪ, ಸಂಸ್ಕೃತಿ ಬೇರೆ ಬೇರೆಯಾಗಿದೆ. ಪ್ರತಿಯೊಂದು ಸಮಾಜದ ವ್ಯಕ್ತಿಗಳು ತಾವು ಬೆಳೆದ ಪರಿಸರ, ಸಮಾಜದಿಂದ ಪಡೆದ ಅನುಭವಗಳಿಂದಾಗಿ ಆಯಾ ಸಮಾಜದ ಸಾಂಸ್ಕೃತಿಕ ರಾಯಭಾರಿಯಂತೆ ಕಾಣುತ್ತಾರೆ. ತುಳುನಾಡಿನ ನಿರ್ದಿಷ್ಟವಾದ ಜಾತಿಯ ಗುಂಪುಗಳಲ್ಲಿ ದೇವಾಡಿಗ ಸಮುದಾಯವೂ ಒಂದು.

**ದೇವಾಡಿಗ ಪದದ ನಿಷ್ಪತ್ತಿ**

ವರ್ತಮಾನ ಕಾಲದಲ್ಲಿ ಸಮುದಾಯ ಸೂಚಕವಾಗಿ ಬಳಕೆಯಾಗುವ 'ದೇವಾಡಿಗ' ಪದದ ನಿಷ್ಪತ್ತಿಯನ್ನು ನೋಡಿದಾಗ ದೇವ+ಅಡಿಗ ಎಂಬ ಎರಡು ಪದಗಳ ಸಂಯೋಗವನ್ನು ಕಾಣಬಹುದು. 'ಅಡಿಗ' ಎಂದರೆ 'ಸೇವೆ ಮಾಡುವವ' ಎಂಬ ಅರ್ಥ ಶಬ್ದಕೋಶದಲ್ಲಿ ದೊರೆಯುತ್ತದೆ. (ಕನ್ನಡ–ಕನ್ನಡ ಶಬ್ದಾರ್ಥಕೋಶ) 'ದೇವಾಡಿಗ' ಎಂಬ ಪದವು ಸಾಮಾನ್ಯ ಅರ್ಥದಲ್ಲಿ ದೇವರ ಸೇವೆ ಮಾಡುವವ, ಪರಿಚಾರಕ ಎಂಬ ಅರ್ಥವನ್ನು ಕೊಡುತ್ತದೆ. ಯು.ಪಿ.ಉಪಾಧ್ಯಾಯ ಅವರ ತುಳು ನಿಘಂಟುವಿನಲ್ಲಿ (ಸಂಪುಟ ನಾಲ್ಕು) – "ದೇವಡಿಗೆ/ದೇವಾಡಿಗೆ (ದೇವಡಿಗ–ದೇವಾಡಿಗ) – ದೇವಸ್ಥಾನಗಳಲ್ಲಿ ಶುದ್ಧೀಕರಣ ಮಾಡುವುದು, ದೋಲು ಗಂಟೆ ಹಾಗೂ ಇತರ ವಾದ್ಯಗಳನ್ನು ಬಾರಿಸುವುದು ಮೊದಲಾದ ಸೇವೆಗಳಲ್ಲಿ ಪಾರಂಪರಿಕವಾಗಿ ತೊಡಗಿಸಿಕೊಂಡ ಜನವರ್ಗ ಎಂಬ ಅರ್ಥವನ್ನು ಕೊಡಲಾಗಿದೆ."

ಇಂದಿರಾ ಹೆಗ್ಗಡೆಯವರು ತಮ್ಮ "ಬಂಟರು–ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ" ಕೃತಿಯಲ್ಲಿ ಮ್ಯೊಲಿ(ದೇವಾಡಿಗ)ರ ಬಗ್ಗೆ ಹೀಗೆ ವಿವರಿಸುತ್ತಾರೆ "ದೇವಾಲಯಗಳಲ್ಲಿ ಇವರ ಸೇವೆ. ಪೂಜೆಯ ಪುರೋಹಿತರಿಗೆ ನೆರವಾಗುವುದು. ದೇವಾಲಯದ ಸಂಕೀರ್ಣವನ್ನು ಶುಚಿಯಾಗಿ ಇರಿಸುವುದು, ತೇರು ಸಿದ್ಧಪಡಿಸುವುದು ಮುಂತಾದ ಎಲ್ಲಾ ಕೆಲಸಗಳನ್ನು ಇವರು ಮಾಡುತ್ತಾರೆ. ದೇವಸ್ಥಾನದ ಗರ್ಭಗುಡಿ ಉಳಿದು ಇತರ ಜಾಗಗಳಲ್ಲಿ ಮುಕ್ತವಾಗಿ ಓಡಾಡುತ್ತಾರೆ. ವೃತ್ತಿಯಲ್ಲಿ ವಾಲಗದವರು. ಊರ ಆರಾಧನೆ, ಕಂಬುಲ ಮುಂತಾದ ಕಾರ್ಯಗಳಿಗೆ ನಿಗದಿತ ಪಡಿದಾನ ಇವರಿಗೆ ಸಲ್ಲಬೇಕು. ವರ್ಷಕ್ಕೆ ಒಮ್ಮೆ ಕಡ್ಡಾಯವಾಗಿ ಊರ ಗುತ್ತು, ಬೂಡು, ಬರ್ಕೆಗಳಿಂದ ಕಲಸೆ, ಮುಡಿ ಭತ್ತದ ಪಡಿದಾನ ಇವರಿಗೆ ಸಲ್ಲಬೇಕು. ಚಾಮುಂಡಿ ಎಂಬ ಸಪ್ತ ಮಾತೃಕೆಯರಲ್ಲಿ ಒಬ್ಬರಾದ ದೇವಿಗೆ ಇವರ ಪೂಜಾರತ್ವ. ಜಟಾಧಾರಿ ಇತ್ಯಾದಿ ದೈವಗಳಿಗೂ ಮ್ಯೊಲಿ ಜನಾಂಗದವರು ಪೂಜೆ ಮಾಡುತ್ತಾರೆ."

ಈ ಮೇಲಿನ ಉಲ್ಲೇಖಗಳ ಪ್ರಕಾರ ದೇವಾಡಿಗ ಪದವು 'ದೇವ' ಮತ್ತು 'ಅಡಿಗ' ಎಂಬ ಎರಡು ಪದಗಳ ಮೂಲಕ ಅರ್ಥವನ್ನು ಪಡೆಯುತ್ತದೆ. 'ಅಡಿಗ' ಪದಕ್ಕೆ ಪುರೋಹಿತ ಎಂಬ ಅರ್ಥವನ್ನು ಪದಕೋಶವು ಹೇಳಿದರೂ ದೇವಾಡಿಗ ಪದವು ದೇವರ ಪರಿಚಾರಕ, ಸೇವಕ ಎಂಬ ಅರ್ಥವನ್ನು ಹೇಳುತ್ತದೆ. ಈ ಮಾತನ್ನು ಥರ್ಸ್ಟನ್ ನೀಡುವ ದಕ್ಷಿಣ ಭಾರತದ ಜಾತಿಗಳ ವಿವರಣೆಯಲ್ಲೂ ಕಾಣಬಹುದು. ಅವನು ದೇವಾಡಿಗರನ್ನು ದಕ್ಷಿಣಕನ್ನಡದಲ್ಲಿ ದೇವಸ್ಥಾನದ ಪರಿಚಾರಕರಾಗಿದ್ದು. ಬ್ರಾಹ್ಮಣರಿಗೆ ಪೂಜಾ ಸಹಾಯಕರಾಗಿದ್ದವರು ಹಾಗೂ ದೇವಾಲಯಗಳಲ್ಲಿ ಪೂಜೆಯ ಸಂದರ್ಭದಲ್ಲಿ ಮಂಗಳವಾದ್ಯಗಳನ್ನು ನುಡಿಸುವವರಾಗಿದ್ದರು ಎನ್ನುತ್ತಾನೆ. 'ದೇವಾಡಿಗರು' ಅಥವಾ 'ಮ್ಯೊಲಿ'ಗಳು ತುಳು ಮಾತನಾಡುವವರು. ಇವರು ಮುಖ್ಯವಾಗಿ ಕೃಷಿಕರು. ಸಾಂಪ್ರದಾಯಿಕ ಉದ್ಯೋಗ ದೇವಸ್ಥಾನದಲ್ಲಿ ಸೇವೆ ಮಾಡುವವರು. ಪುರುಷರು ಹಾಗೂ ಮಹಿಳೆಯರು ಗೃಹಕೃತ್ಯಗಳ ಸೇವೆಯಲ್ಲಿ ತೊಡಗಿಕೊಂಡಿದ್ದಾರೆ. ಅಳಿಯ ಸಂತಾನ ಪದ್ಧತಿಯನ್ನು ಅನುಸರಿಸುತ್ತಿದ್ದು, 'ಬಳಿ' ಪದ್ಧತಿ ದೇವಾಡಿಗರಲ್ಲಿ ಇದೆ. ವಿವಾಹ ಪದ್ಧತಿಗಳಲ್ಲಿ ಧಾರೆ ಎರೆಯುವ ಕ್ರಮ ಇದೆ. ವರ್ತಮಾನದಲ್ಲಿ ದೇವಾಡಿಗರು ದೇವಾಲಯಗಳಲ್ಲಿ ಪೂಜಾಕಾರ್ಯಗಳಲ್ಲಿ ಬಾಹ್ಮಣರಿಗೆ ಸಹಾಯಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಂಗೀತ ವಾದ್ಯಗಳಾದ ಡೋಲುಗಂಟೆ, ನಾದಸ್ವರ ಮುಂತಾದ ಪಂಚವಾದ್ಯಗಳನ್ನು ದೇವಾಲಯಗಳಲ್ಲಿ, ದೇವರ ಪೂಜಾ ಸಮಯ ಹಾಗೂ ಜಾತ್ರಾ ಮಹೋತ್ಸವಗಳಲ್ಲಿ ನುಡಿಸುತ್ತಿದ್ದಾರೆ.

**ಭೌಗೋಳಿಕ ಪರಿಸರ ಮತ್ತು ಜನಸಂಖ್ಯೆ**

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಬಂಟ್ವಾಳ, ಮುಲ್ಕಿ, ಮೂಡಬಿದ್ರೆ, ಕಾರ್ಕಳ, ಬೆಳ್ತಂಗಡಿ, ಪುತ್ತೂರು ತಾಲೂಕುಗಳಲ್ಲಿ ಮತ್ತು ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕು ಹಾಗೂ ಕುಂದಾಪುರ ತಾಲೂಕುಗಳಲ್ಲಿ ಹಾಗೂ ಉತ್ತರಕನ್ನಡ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ದೇವಾಡಿಗರು ಹೆಚ್ಚಿನ ಸಂಖ್ಯೆಗಳಲ್ಲಿ ವಾಸಿಸುತ್ತಿದ್ದಾರೆ. 1984ರ ಕರ್ನಾಟಕ ಜಾತಿ ಜನಗಣತಿಯ ಪ್ರಕಾರ ದೇವಾಡಿಗರ ಜನಸಂಖ್ಯೆ 1,04,310 (Population of castes/communities of the State of Karnataka as per Survey -1984, Page - 28)ಆಗಿತ್ತು. 2011ರ ಜನಗಣತಿಯ ಪ್ರಕಾರ ಸುಮಾರು 2,83,625 ಎಂದು ಅಂದಾಜಿಸಲಾಗಿದೆ. (ಸುರೇಖ ಹೇಮನಾಥ ದೇವಾಡಿಗರ ಪುಸ್ತಕದ ಉಲ್ಲೇಖ) ಪ್ರಸ್ತುತ ಕರ್ನಾಟಕದಲ್ಲಿ ಜಾತಿ ಜನಗಣತಿಯ ಸಮೀಕ್ಷೆ ನಡೆಯದೆ ಇರುವುದರಿಂದ ಅಧಿಕೃತವಾಗಿ ದೇವಾಡಿಗ ಜನಸಂಖ್ಯೆಯನ್ನು ದಾಖಲಿಸುವುದು ಸಾಧ್ಯವಿಲ್ಲ. ಆದರೆ ದೇವಾಡಿಗರ ಜನಸಂಖ್ಯೆ ನಾಲ್ಕು ಲಕ್ಷದವರೆಗೆ ಇರಬಹುದು ಎಂದು ಅಂದಾಜಿಸಬಹುದು.

ದಕ್ಷಿಣ ಕನ್ನಡ ಹಾಗೂ ಉಡುಪಿಯ ಬ್ರಹ್ಮಾವರದವರೆಗಿನ ಪರಿಸರದ ದೇವಾಡಿಗರ ಮಾತೃಭಾಷೆ ತುಳು. ಪ್ರಾದೇಶಿಕ ಭಾಷೆಗನುಸಾರವಾಗಿ ಕುಂದಾಪುರದ ಪ್ರದೇಶಗಳಲ್ಲಿ ಕನ್ನಡ ಮಾತನಾಡುತ್ತಾರೆ.

**ಸಾಂಪ್ರದಾಯಿಕ ಕುಲಕಸುಬಿನ ವೈಶಿಷ್ಟ್ಯ**

ದೇವಾಡಿಗ ಸಮುದಾಯದ ಮುಖ್ಯ ಕುಲಕಸುಬು ದೇವಸ್ಥಾನಗಳಲ್ಲಿ ಸಂಗೀತ ವಾದ್ಯಗಳನ್ನು ನುಡಿಸುವುದು ಮತ್ತು ಪರಿಚಾರಿಕೆ. ಅಂದರೆ ದೇವಸ್ಥಾನದ ಪ್ರಾಂಗಣವನ್ನು ಶುದ್ಧೀಕರಿಸುವ ಹಾಗೂ ಪೂಜಾಕಾರ್ಯಗಳಲ್ಲಿ ಬ್ರಾಹ್ಮಣರಿಗೆ ಸಹಾಯಕರಾಗಿರುವುದು. ಇದಲ್ಲದೆ ದೇವಸ್ಥಾನದ ಪೂಜಾ ಸಂದರ್ಭದಲ್ಲಿ ಮತ್ತು ಜಾತ್ರಾ ಮಹೋತ್ಸವಗಳಲ್ಲಿ ಮಂಗಳ ವಾದ್ಯಗಳನ್ನು ನುಡಿಸುವುದು. ತುಳುನಾಡಿನಲ್ಲಿ ನೆಲೆಸಿರುವ ದೇವಾಡಿಗರು ತುಳುನಾಡಿನ ಇತರ ಸಮುದಾಯಗಳಿಗಿಂತ ಭಿನ್ನವಾಗಿ ತಮ್ಮದೇ ಆದ

ಸಾಂಸ್ಕೃತಿಕ ಅನನ್ಯತೆಯನ್ನು ಹೊಂದಿದ್ದಾರೆ. ತುಳುನಾಡಿನಲ್ಲಿ ನೆಲೆಸಿರುವ ಎಲ್ಲಾ ಬ್ರಾಹ್ಮಣೇತರ ಸಮುದಾಯಗಳು ತಮ್ಮದೇ ಆದ ಕುಲಕಸುಬನ್ನು ಹೊಂದಿವೆ. ಅವೆಲ್ಲವೂ ಕೃಷಿ ಹಾಗೂ ಕೃಷಿಸಂಬಂಧಿ ವೃತ್ತಿಗಳಾಗಿವೆ. ಆದರೆ ದೇವಾಡಿಗ ಸಮುದಾಯವು ಇವೆಲ್ಲ ಸಮುದಾಯಗಳಿಗಿಂತ ಭಿನ್ನವಾಗಿದ್ದು ದೇವಸ್ಥಾನಗಳಲ್ಲಿ ವಾದ್ಯಗಾರರಾಗಿದ್ದು, ಪರಿಚಾರಿಕೆಯನ್ನು ಮಾಡುವ ಕೃಷಿಯೇತರ ಕುಲಕಸುಬನ್ನು ಹೊಂದಿದೆ. ಉಪಕಸುಬನ್ನಾಗಿ ಕೃಷಿಯನ್ನು ಅವಲಂಬಿಸಿದ್ದಾರೆ.

ದೇವಾಡಿಗರು ಪ್ರಾತ:ಕಾಲದ ಪೂಜೆಯಿಂದ ತೊಡಗಿ ರಾತ್ರಿಯ ಕೊನೆಯ ಪೂಜೆಯವರೆಗೂ ದೇವಸ್ಥಾನದ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಪ್ರಾತಃಕಾಲದಲ್ಲಿ 'ನಿರ್ಮಲೆ ಬಾರಿಸುವುದರಿಂದ' ಅವರ ದೈನಂದಿನ ಕಾರ್ಯಗಳು ಆರಂಭಗೊಳ್ಳುತ್ತದೆ. 'ನಿರ್ಮಲೆ ಬಾರಿಸುವುದು' ಎಂದರೆ ಪ್ರಾತಃಕಾಲದಲ್ಲಿ ಬ್ರಾಹ್ಮಣರು ದೇವಸ್ಥಾನದ ಗರ್ಭಗುಡಿಯನ್ನು ಪ್ರವೇಶಿಸುವ ಮೊದಲು ದೇವರನ್ನು ಎಬ್ಬಿಸುವ ಶಾಸ್ತ್ರಪೂಜೆ ಇದೆ. ವಾದ್ಯಗಳನ್ನು ಮೊಳಗಿಸಿ ದೇವರನ್ನು ಎಚ್ಚರಗೊಳಿಸಲಾಗುತ್ತದೆ. ಆಗ ಡೋಲು, ಜಾಗಟೆ, ಶಂಖವನ್ನು ನುಡಿಸುತ್ತಾರೆ. ಕೆಲವು ಕಡೆ ನಗಾರಿಯನ್ನು ಬಾರಿಸುತ್ತಾರೆ. ಇದನ್ನು 'ನಿರ್ಮಲೆ ಬಾರಿಸುವುದು' ಎಂದು ಕರೆಯಲಾಗುತ್ತದೆ. ಮಧ್ಯಾಹ್ನದ ಪೂಜಾ ಸಮಯದಲ್ಲೂ ಡೋಲು– ಗಂಟೆಯನ್ನು (ಜಾಗಟೆ) ಬಾರಿಸುತ್ತಾರೆ. ಒಬ್ಬನೇ ವ್ಯಕ್ತಿ ಏಕಕಾಲದಲ್ಲಿ ಡೋಲು ಮತ್ತು ಗಂಟೆಯನ್ನು ಬಾರಿಸುವುದು ವಿಶೇಷ. ಬಲಗೈಯಲ್ಲಿ ಡೋಲು ಹಾಗೂ ಎಡಗೈಯಲ್ಲಿ ಗಂಟೆ(ಜಾಗಟೆ)ಯನ್ನು ಬಾರಿಸುತ್ತಾರೆ.

ಜಾತ್ರಾ ಮಹೋತ್ಸವಗಳಲ್ಲಿ ದೇವಾಡಿಗರ ಪಾತ್ರ ಮಹತ್ವದ್ದು. ತಿಮಿಲೆ, ಉಡ್ಕೆ, ಡೋಲು, ಚೆಂಡೆ, ಪಟ್ಟಾವು, ನಗಾರಿ, ಸೂರ್ಯವಾದ್ಯ, ನಾದಸ್ವರ ಮೊದಲಾದ ವಾದ್ಯಗಳನ್ನು ಜಾತ್ರೆಯ ಸಂದರ್ಭಗಳಲ್ಲಿ ನುಡಿಸುತ್ತಿದ್ದು, ದೇವಸ್ಥಾನದ ಧ್ವಜಾರೋಹಣದಿಂದ ಮೊದಲ್ಗೊಂಡು ಧ್ವಜಾವರೋಹಣದವರೆಗೆ ಈ ವಾದ್ಯಗಳನ್ನು ನುಡಿಸಲಾಗುತ್ತದೆ. ಜಾತ್ರೆಯ ಸಂದರ್ಭಗಳಲ್ಲಿ ದೇವಸ್ಥಾನದಲ್ಲಿ ನಡೆಯುವ ದೇವರ ಉತ್ಸವ ಬಲಿಯಲ್ಲಿ ಒಂದೊಂದು ಸುತ್ತು ಬಲಿಗೆ ಬಳಸುವ ಚರ್ಮವಾದ್ಯಕ್ಕೆ ಅನುಗುಣವಾಗಿ ಸುತ್ತನ್ನು ಗುರುತಿಸಲಾಗುತ್ತದೆ ಎಂದು ಮಂಗಳಾದೇವಿ ದೇವಸ್ಥಾನದ ಸುರೇಶ್ ದೇವಾಡಿಗರವರು ಹೇಳುತ್ತಾರೆ. 'ತಿಮಿಲೆ' ಸುತ್ತುಬಲಿ, 'ಉಡ್ಕೆ' ಸುತ್ತುಬಲಿ, 'ಚೆಂಡೆ' ಸುತ್ತುಬಲಿ ಹೀಗೆ ಸುತ್ತನ್ನು ಗುರುತಿಸಲಾಗುತ್ತದೆ. ಇವುಗಳ ಜೊತೆಗೆ ನಾದಸ್ವರ, ಸೂರ್ಯವಾದ್ಯ (ಸುರೋದ್ಯ), ಶೃತಿವಾದ್ಯ ಮುಂತಾದ ಪಂಚವಾದ್ಯಗಳನ್ನು ನುಡಿಸುತ್ತಾ ಪ್ರಾಂಗಣದ ಸುತ್ತು ಬರುತ್ತಾರೆ. ದೇವರಿಗೆ ಕೈಬಳಕ್ (ಕೈದೀಪ) ವನ್ನು ಮತ್ತು ದೀವಟಿಗೆಯನ್ನೂ ದೇವಾಡಿಗರು ಹಿಡಿಯುವುದು ಸಂಪ್ರದಾಯ. ದೇವರ ಉತ್ಸವಮೂರ್ತಿಯ ಹಿಂದೆ ಛತ್ರ ಚಾಮರಗಳನ್ನು ತುಳುನಾಡಿನ ಇತರ ಸಮುದಾಯದವರು ಹಿಡಿಯುತ್ತಾರೆ. ರಂಗಪೂಜೆಯ ಸಂದರ್ಭದಲ್ಲಿ ಪೂಜೆಗೆ ಅಣಿಗೊಳಿಸು ಕಾರ್ಯವನ್ನು ಮಾಡುತ್ತಾರೆ. ರಂಗಪೂಜೆಗೆ ಬಟ್ಟೆಯನ್ನು ಮಡಿವಾಳ ಸಮುದಾಯದವರು ಹಾಕುತ್ತಾರೆ. ಮಂಗಳಾದೇವಿ ದೇವಸ್ಥಾನದಲ್ಲಿ ಜಾತ್ರೆಯ ಸಂದರ್ಭದಲ್ಲಿ 'ಕೊಡಿಮರ'ಕ್ಕೆ ಹಣ್ಣು ಹೂಗಳಿಂದ ಅಲಂಕರಿಸುವುದು ಹಾಗೂ 'ಕೊಡಿ ಏರಿಸುವುದು' (ಧ್ವಜಾರೋಹಣ) ದೇವಾಡಿಗ ಸಮುದಾಯದವರು. ದೇವರ ಪೂಜಾಸಾಮಗ್ರಿಗಳನ್ನು ಶುದ್ಧಮಾಡಿ ಪೂಜೆಗೆ ಅಣಿಗೊಳಿಸುವುದು, ದೇವಸ್ಥಾನದ ಪ್ರಾಂಗಣವನ್ನು ಶುದ್ದಗೊಳಿಸುವುದು, ದೇವರ ಉತ್ಸವಮೂರ್ತಿಯ ಸುತ್ತು ಬಲಿಯ ಸಂದರ್ಭದಲ್ಲಿ ಹಾಕುವ 'ಬಲಿತಪ್ಪು'ನ್ನು ಶುದ್ಧೀಕರಿಸುವುದು ದೇವಾಡಿಗರ ಕೆಲಸವಾಗಿರುತ್ತದೆ. 'ಬಲಿತಪ್ಪು' (ತುಳುನಾಡಿನ ದೇವಸ್ಥಾನದ ಪ್ರಾಂಗಣದಲ್ಲಿ ಕಲ್ಲಿಗಳಿಗೆ ಹಾಕುವ ಒಂದು ಬಗೆಯ ಸೊಪ್ಪು) ಹಾಕುವ ಸಂದರ್ಭದಲ್ಲಿ

'ತಿಮಿಲೆ' ಎನ್ನುವ ಚರ್ಮವಾದ್ಯವನ್ನು ಬಾರಿಸುತ್ತಾರೆ. ಹೀಗೆ ದೇವಾಡಿಗರು ದೇವಸ್ಥಾನದ ಎಲ್ಲಾ ಕಾರ್ಯಗಳಲ್ಲಿ ತೊಡಗಿಕೊಂಡಿರುವ ಸಮುದಾಯ. ದಕ್ಷಿಣಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಎಲ್ಲಾ ದೇವಾಲಯಗಳಲ್ಲೂ ದೇವಾಡಿಗರೇ ವಾದ್ಯ ನುಡಿಸುವವರು ಹಾಗೂ ಪೂಜಾ ಸಹಾಯಕರಾಗಿದ್ದಾರೆ.

**ವರ್ತಮಾನದ ಸ್ಥಿತಿ**

ವಸಾಹತುಶಾಹಿ ಆಧುನಿಕತೆಯು ತುಳುನಾಡನ್ನು ಪ್ರವೇಶಿಸಿದಾಗ ಅದು ಪರಂಪರಾಗತ ಸ್ಥಿತಿ ಮತ್ತು ಆಲೋಚನೆಗಳನ್ನು ಬದಲಾಯಿಸಿತು. ಆರ್ಥಿಕವಾಗಿ ಹಿಂದುಳಿದಿರುವ ದೇವಾಡಿಗ ಸಮುದಾಯವು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿತು. ಶೈಕ್ಷಣಿಕವಾಗಿ ಹಿಂದುಳಿದಿರುವುದೇ ಈ ಸಮುದಾಯವು ಸಮಾಜದಲ್ಲಿ ಹೆಚ್ಚಾಗಿ ಗುರುತಿಸಿಕೊಳ್ಳದಿರಲು ಕಾರಣವಾಗಿದೆ. ವಸಾಹತುಶಾಹಿ ಆಧುನಿಕತೆಯು ಹೆಚ್ಚು ಅವಕಾಶವಿರುವ ಕ್ಷೇತ್ರಗಳ ಕಡೆಗೆ ದಿಕ್ಕನ್ನು ತೋರಿಸಿದಾಗ ದೇವಾಡಿಗರು ಈ ಅವಕಾಶಗಳನ್ನು ಬಳಸಿಕೊಂಡರು. ವೃತ್ತಿಯಲ್ಲಿ ಅವಕಾಶಗಳನ್ನು ಪಡೆಯಬೇಕಾದರೆ ಶಿಕ್ಷಣದ ಅಗತ್ಯತೆಯನ್ನು ಮನಗಂಡು ಶಿಕ್ಷಣಕ್ಕೆ ತೆರೆದುಕೊಂಡರು. ಸಾಂಪ್ರದಾಯಿಕ ವೃತ್ತಿಯಿಂದ ಇತರ ವೃತಿಗಳ ಕಡೆಗೆ ಹಳ್ಳಿಯಿಂದ ನಗರ ಪ್ರದೇಶಗಳಿಗೆ ವಲಸೆ ಹೋಗಲಾರಂಭಿಸಿದರು. ಜೀವನ ನಿರ್ವಹಣೆಗಾಗಿ ನಗರದ ಕಡೆಗೆ ವಲಸೆ ಅನಿವಾರ್ಯವಾಯಿತು. ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ತಮ್ಮ ಸಮುದಾಯವನ್ನೂ ಗುರುತಿಸಬೇಕೆಂಬ ಹಂಬಲವು ಸಮಾಜದಲ್ಲಿ ಹೊಸ ಅವಕಾಶಗಳನ್ನು ಹುಡುಕುವ ಅನಿವಾರ್ಯತೆ ಉಂಟಾಯಿತು. ದೇವಾಡಿಗ ಸಮುದಾಯವನ್ನು ಬಲಿಷ್ಠಗೊಳಿಸುವ ಸಾಮಾಜಿಕ ಜವಾಬ್ದಾರಿಯೊಂದಿಗೆ ಸಮುದಾಯ ವನ್ನು ಕಟ್ಟುವ ಕಾರ್ಯಗಳು ನಡೆದವು. ದೇವಾಡಿಗರನ್ನು ಸಂಘಟಿಸುವ ಮೂಲಕ ಸಮುದಾಯದ ಅಭಿವೃದ್ಧಿಯ ಕಾರ್ಯಗಳನ್ನು ಮಾಡುವ ಆಲೋಚನೆಯು ದೇವಾಡಿಗರು ಇತರ ಸಮುದಾಯಗಳೊಡನೆ ಗುರುತಿಸುವಂತಾಯಿತು. ಸಾಂಪ್ರದಾಯಿಕ ವೃತ್ತಿಯ ಜೊತೆಗೆ ಇತರ ವೃತ್ತಿಗಳಲ್ಲೂ ತೊಡಗಿಸಿಕೊಂಡು ಆರ್ಥಿಕವಾಗಿ ಸದೃಢರಾಗುವಂತೆ ಆಧುನಿಕ ಶಿಕ್ಷಣವು ಪ್ರೇರೇಪಿಸಿತು. ಸಮುದಾಯದ ಕುರಿತಾದ ಜಾಗೃತಿ ದೇವಾಡಿಗರು ಇತರ ಕ್ಷೇತ್ರಗಳಲ್ಲೂ ತಮ್ಮನ್ನು ತೊಡಗಿಸಿಕೊಳ್ಳುವಂತೆ ಮಾಡಿತು.

ಭೂಮಿಯ ಒಡೆತನದ ಹಕ್ಕನ್ನು ಹೊಂದಿರದ ದೇವಾಡಿಗ ಸಮುದಾಯವು ಅವಕಾಶಗಳನ್ನು ಹುಡುಕುತ್ತಾ ಮೊದಲು ವಲಸೆ ಹೋದ ನಗರ ಮುಂಬಾಯಿ. ಬದುಕಿನ ನೆಲೆ ಹಾಗೂ ಉದ್ಯೋಗಾವಕಾಶಗಳನ್ನು ಅರಸಿ ಹೋದವರಲ್ಲಿ ದೇವಾಡಿಗರೇ ಮೊದಲಿಗರಲ್ಲ. ತುಳುನಾಡಿನ ಸಮುದಾಯಗಳಾದ ಮೊಗವೀರರು, ಬಿಲ್ಲವರು ಮತ್ತು ಬಂಟರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಮಾಯಾನಗರಿ ಮುಂಬಯಿ ದೇವಾಡಿಗರನ್ನೂ ಕೈ ಬೀಸಿ ಕರೆಯಿತು. ಜೀವನೋಪಾಯಕ್ಕಾಗಿ ಉದ್ಯೋಗವನ್ನು ಅರಸುತ್ತಾ ಮುಂಬಾಯಿಗೆ ವಲಸೆ ಹೋದ ದೇವಾಡಿಗರು ಹೊಟೇಲ್ ಉದ್ಯಮದಲ್ಲಿ ಕಾರ್ಮಿಕರಾಗಿ ಕೆಲಸ ಮಾಡಲಾರಂಭಿಸಿದರು. ಇಂದು ಮುಂಬಾಯಿಯಲ್ಲಿ ಹೊಟೇಲ್ ಉದ್ಯಮವನ್ನು ನಡೆಸುವ ದೇವಾಡಿಗರು ಆರಂಭದಲ್ಲಿ ತುಳುನಾಡಿನಿಂದ ಉದ್ಯೋಗ ಅರಸಿ ವಲಸೆ ಹೋದವರಾಗಿದ್ದಾರೆ. ಜೀವನ ನಿರ್ವಹಣೆಯ ಅನಿವಾರ್ಯತೆ ಕುಲಕಸುಬಿನಿಂದ ಇತರ ವೃತ್ತಿಯ ಕಡೆಗೆ ಚಲಿಸುವಂತೆ ಮಾಡಿತು. ಬದಲಾಗುತ್ತಿರುವ ಸಮಾಜದಲ್ಲಿ ಜೀವನ ಶೈಲಿಗಳು ಹಾಗೂ ಅಗತ್ಯತೆಗಳು ಬದಲಾಗುತ್ತಿದ್ದು ಕುಲಕಸುಬುಗಳಿಂದ ಬರುವ ಆದಾಯ ಜೀವನ ನಿರ್ವಹಣೆಗೆ ಸಾಕಾಗದೆ ಅವರಿಗೆ ಉದ್ಯೋಗನಿಮಿತ್ತ ವಲಸೆ ಹೋಗುವುದು ಅನಿವಾರ್ಯವಾಯಿತು. ಇತರರೊಡನೆ ಹಾಗೂ ಸಮಾಜದೊಡನೆ, ಕಾಲದ ಅನಿವಾರ್ಯತೆಯೊಡನೆ ಚಲಿಸಬೇಕಾದ ಸವಾಲುಗಳು ದೇವಾಡಿಗರನ್ನು

ಕುಲಕುಸುಬಿನ ವೃತ್ತಿಯಿಂದ ಇತರ ವೃತ್ತಿಗೆ ಪಲ್ಲಟಗೊಳ್ಳುವಂತೆ ಮಾಡಿತು, ಇದರ ಜೊತೆಗೆ ತನ್ನ ಮೂಲ ನೆಲೆಯನ್ನು ಬಿಟ್ಟು ನಗರ ಪ್ರದೇಶಗಳಿಗೆ ಹೋಗುವ ಅನಿವಾರ್ಯತೆ ಉಂಟಾಯಿತು.

ವರ್ತಮಾನದಲ್ಲಿ ದೇವಾಡಿಗರು ಮುಂಬಾಯಿ ಮಹಾನಗರದಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಹೊಟೇಲ್ ಉದ್ಯಮದಲ್ಲೇ ತಮ್ಮನ್ನು ತೊಡಗಿಸಿಕೊಂಡು ಆರ್ಥಿಕವಾಗಿ ಮುಂದುವರೆದು ಸಮಾಜದಲ್ಲಿ ತಮ್ಮನ್ನು ಗುರುತಿಸಿಕೊಂಡಿರುವ ದೇವಾಡಿಗರನ್ನು ಪ್ರಸ್ತುತ ದಿನಗಳಲ್ಲಿ ಕಾಣಬಹುದು. ಬದುಕಿನ ಹೋರಾಟದ ಸವಾಲು ದೇವಾಡಿಗರನ್ನು ನಗರ ಪ್ರದೇಶದ ಕಡೆಗೆ ಚಲಿಸುವಂತೆ ಮಾಡಿತು. ವರ್ತಮಾನದಲ್ಲಿ ದುಬೈ ಹಾಗೂ ಇನ್ನಿತರ ದೇಶಗಳಲ್ಲಿ ಬದುಕು ಕಟ್ಟಿಕೊಂಡಿರುವ ದೇವಾಡಿಗರನ್ನು ಕಾಣಬಹುದು. ಭಾರತದಾದ್ಯಂತ ಬೇರೆ ಬೇರೆ ಕಾರಣಗಳಿಂದ ದೇವಾಡಿಗರು ನೆಲೆಸಿದ್ದಾರೆ. ಆದರೆ ಇವರೆಲ್ಲರ ಮೂಲ ನೆಲೆ ತುಳುನಾಡೇ ಆಗಿದ್ದು, ಆಚರಣೆ, ಆರಾಧನೆ ಹಾಗೂ ಇನ್ನಿತರ ಕಾರ್ಯಕ್ರಮಗಳ ಸಂದರ್ಭದಲ್ಲಿ ಮರಳಿ ಊರಿಗೆ ಬರುತ್ತಾರೆ. ತುಳುನಾಡಿನಲ್ಲೂ ಇಂದು ವಾಣಿಜ್ಯೋದ್ಯಗಳು ಆರಂಭವಾಗಿದ್ದು ದೇವಾಡಿಗರು ವಿವಿಧ ಉದ್ಯಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆದರೆ ತುಳುನಾಡಿನ ಇತರ ಸಮುದಾಯದ ಜನರೊಡನೆ ಸ್ಪರ್ಧಿಸಬೇಕಾದ ಸವಾಲು ದೇವಾಡಿಗ ಸಮುದಾಯಕ್ಕಿದೆ. ಕಡಿಮೆ ಜನಸಂಖ್ಯೆಯ ದೇವಾಡಿಗರು ತುಳುನಾಡಿನ ಪ್ರಬಲ ಸಮುದಾಯಗಳ ನಡುವೆ ಪೈಪೋಟಿ ನಡೆಸಲಾಗದೆ ಹಿಂದುಳಿದಿರುವುದನ್ನು ಕಾಣಬಹುದು.

**ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಂಡ ಸಾಧಕರು**

ಎಲ್ಲಾ ಸಮುದಾಯಗಳಂತೆ ತಮ್ಮ ಸಮುದಾಯಗಳು ಬೆಳೆಯಬೇಕು ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಳ್ಳಬೇಕೆಂಬ ಹಂಬಲ ಸಮುದಾಯ ದೊಳಗೆ ಪ್ರಜ್ಞೆಯ ರೀತಿಯಲ್ಲಿ ಬೆಳೆಯತೊಡಗಿತು. ಶಿಕ್ಷಣ ಮಾತ್ರ ನಮ್ಮನ್ನು ಸುಧಾರಣೆಯ ಪಥದೆಡೆಗೆ ಒಯ್ಯಬಲ್ಲುದು ಎನ್ನುವ ಮನೋಭಾವವು ಸಮುದಾಯದ ಜನರಲ್ಲಿ ಮೂಡತೊಡಗಿತು. ಇದರಿಂದ ಪ್ರಭಾವಿತರಾದ ಕೆಲವರು ಶಿಕ್ಷಣದ ಮೂಲಕ ವಿವಿಧ ಕ್ಷೇತ್ರಗಳಲ್ಲಿ ಸಾಧನೆಯನ್ನು ಮಾಡಿದರೆ, ರಾಜಕೀಯ, ಸಮಾಜಸೇವೆ, ಕ್ರೀಡೆ, ಕಲೆ ಮತ್ತು ಸಾಹಿತ್ಯ, ವ್ಯವಹಾರೋದ್ಯಮ ಮುಂತಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಸಮಾಜದಲ್ಲಿ ಉನ್ನತ ಸ್ಥಾನಗಳಲ್ಲಿ ಗುರುತಿಸಿಕೊಂಡ ಸಾಧಕರು ದೇವಾಡಿಗ ಸಮುದಾಯದಲ್ಲಿದ್ದಾರೆ. ಆದರೆ ಉನ್ನತ ಹುದ್ದೆಯಲ್ಲಿ ಗುರುತಿಸಿಕೊಂಡ ಸಾಧಕರು ಇತರ ಸಮುದಾಯಗಳಿಗೆ ಹೋಲಿಸಿದರೆ ದೇವಾಡಿಗ ಸಮುದಾಯದಲ್ಲಿ ಬೆರಳೆಣಿಕೆಯಷ್ಟು ಜನರು ಮಾತ್ರ. ಇದಕ್ಕೆ ದೇವಾಡಿಗರು ಕಡಿಮೆ ಜನಸಂಖ್ಯೆಯನ್ನು ಹೊಂದಿರುವುದು ಒಂದು ಕಾರಣವಾಗಿದೆ.

ಕರ್ನಾಟಕ ರಾಜ್ಯ ರಾಜಕೀಯದಲ್ಲಿ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ದೇವಾಡಿಗ ಸಮುದಾಯವನ್ನು ಗುರುತಿಸುವಂತೆ ಮಾಡಿದ ರಾಜಕಾರಣಿ ಡಾ.ಎಂ.ವೀರಪ್ಪ ಮೈಲಿಯವರು. ದೇವಾಡಿಗ ಸಮುದಾಯದಲ್ಲಿ ದೈಹಿಕ ಪರಿಶ್ರಮದ ಕ್ರೀಡೆಗಳಾದ ಕಬಡ್ಡಿ, ವೈಟ್ ಲಿಫ್ಟಿಂಗ್, ಪವರ್ ಲಿಫ್ಟಿಂಗ್ ಮೊದಲಾದವುಗಳಲ್ಲಿ ಅಂತರ್ ರಾಷ್ಟ್ರ, ರಾಷ್ಟ್ರ, ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡಿರುವುದನ್ನು ಕಾಣಬಹುದು. ರಿಷಾಂಕ್ ದೇವಾಡಿಗ ರಾಷ್ಟ್ರ ಮಟ್ಟದ ಕಬಡ್ಡಿ ಆಟಗಾರನಾಗಿ ಗುರುತಿಸಿಕೊಂಡಿದ್ದಾರೆ. ಪವರ್ ಲಿಫ್ಟಿಂಗ್‌ನಲ್ಲಿ ಸುರೇಶ್ ದೇವಾಡಿಗ, ಸಮಾಜಮುಖಿ ಕಾರ್ಯಗಳಲ್ಲಿ ಶ್ರೀ ಧರ್ಮಪಾಲ ಯು. ದೇವಾಡಿಗ, ವೈದ್ಯಕೀಯ ಕ್ಷೇತ್ರದಲ್ಲಿ ಪ್ರಸಿದ್ಧ ನ್ಯೂರೋ ಸರ್ಜನ್ ಡಾ.ಕೆ.ವಿ.ದೇವಾಡಿಗ, ಹೃದಯ ಶಸ್ತ್ರ ಚಿಕಿತ್ಸಕ ಡಾ. ಪ್ರವೀಣ್ ಕುಮಾರ್, ಐ.ಪಿ.ಎಸ್. ಅಧಿಕಾರಿ ಶ್ರೀ ರೋಶನ್, ಮಾಧ್ಯಮ ಕ್ಷೇತ್ರದಲ್ಲಿ ಹೆಸರು ಗಳಿಸಿದ ವಿಜಯಲಕ್ಷ್ಮೀ ಶಿಬರೂರು, ಕಲಾಕ್ಷೇತ್ರದಲ್ಲಿ ಕಾಮಕೋಟಿ ಆಸ್ಥಾನ ವಿದ್ವಾನ್ ಹಾಗೂ ಕರ್ನಾಟಕ ರಾಜ್ಯ ಪ್ರಶಸ್ತಿಗಳಿಸಿದ ನಾದಸ್ವರ ವಾದಕ ನಾಗೇಶ್ ಬಪ್ಪನಾಡು, ಮೇಘ ಸಾಲಿಗ್ರಾಮ

ಹೀಗೆ ದೇವಾಡಿಗ ಸಮುದಾಯದ ಅನೇಕರು ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸುತ್ತಿದ್ದಾರೆ.

**ವರ್ತಮಾನದ ಸವಾಲುಗಳು**

ದೇವಾಡಿಗ ಸಮುದಾಯದಲ್ಲಿ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿಗಳನ್ನು ಗಮನಿಸಿದಾಗ ಕೇವಲ ಬೆರಳೆಣಿಕೆಯಷ್ಟು ಜನರು ಮಾತ್ರ ಸಮಾಜದಲ್ಲಿ ಗುರುತಿಸಿಕೊಂಡಿರುವುದನ್ನು ಕಾಣಬಹುದು. ಆರ್ಥಿಕವಾಗಿ ಸಮುದಾಯವು ಹಿಂದಿಳಿದಿರುವ ಕಾರಣ ಉನ್ನತ ಶಿಕ್ಷಣವನ್ನು ಪಡೆಯಲು ಸಾಧ್ಯವಾಗದೆ ಸಮಾಜದಲ್ಲಿ ಇತರ ವೃತ್ತಿಗಳನ್ನು ಮಾಡುತ್ತಾ ಜೀವನ ನಿರ್ವಹಣೆ ಮಾಡುವ ಅನಿವಾರ್ಯತೆ ಸಮುದಾಯಕ್ಕೆ ಸವಾಲಾಗಿ ಪರಿಣಮಿಸಿದೆ. ಉದ್ಯಮಗಳಲ್ಲಿ ಇತರ ಸಮುದಾಯಗಳೊಡನೆ ಪೈಪೋಟಿ ಮಾಡುವಷ್ಟು ದೇವಾಡಿಗ ಸಮುದಾಯವು ಬೆಳೆಯದಿರುವ ಕಾರಣ ಕೆಲವರು ಮಾತ್ರ ಉದ್ಯಮಿಗಳಾಗಿ ಬೆಳೆದಿದ್ದಾರೆ. ಅನುಭವದ ಕೊರತೆ ಹಾಗೂ ಇತರ ಸಮುದಾಯಗಳೊಡನೆ ಆರ್ಥಿಕವಾಗಿ ಹೋರಾಟ ಮಾಡಲಾಗದೆ ದೇವಾಡಿಗರು ಹಿಂದುಳಿದಿರಲು ಕಾರಣವಾಗಿರಬಹುದು. 1990ರಲ್ಲಿ ಕರ್ನಾಟಕ ಮೂರನೇಯ ಹಿಂದುಳಿದ ವರ್ಗಗಳ ಆಯೋಗವು ದೇವಾಡಿಗ ಸಮುದಾಯವನ್ನು ಹಿಂದುಳಿದ ವರ್ಗ '2ಎ' ಎಂದು ಘೋಷಿಸಿದ ನಂತರ ದೇವಾಡಿಗ ಸಮುದಾಯದವರಿಗೂ ಎಲ್ಲಾ ಕ್ಷೇತ್ರಗಳಲ್ಲಿಯೂ ಮೀಸಲಾತಿಗಳು ದೊರೆತು ಶಿಕ್ಷಣ ಹಾಗೂ ಸರಕಾರಿ ಉದ್ಯೋಗಗಳು ಮೀಸಲಾತಿಯ ಅಡಿಯಲ್ಲಿ ದೊರೆಯುವಂತಾಯಿತು. ಈಗಲೂ ಆರ್ಥಿಕವಾಗಿ ಹಿಂದುಳಿದಿರುವ ದೇವಾಡಿಗ ಸಮುದಾಯಕ್ಕೆ ಶಿಕ್ಷಣದ ಜೊತೆಗೆ ಉದ್ಯೋಗದ ಅನಿವಾರ್ಯತೆಯೂ ಇದೆ.

ದೇವಾಡಿಗ ಸಮುದಾಯವು ಕರಾವಳಿ ಕರ್ನಾಟಕದ ಚಿಕ್ಕ ಸಮುದಾಯ. ಆದರೂ ಈ ಸಮುದಾಯಕ್ಕೆ ಅದರದೇ ಆದ ಇತಿಹಾಸ, ಪರಂಪರೆ ಹಾಗೂ ಸಂಸ್ಕೃತಿಗಳಿವೆ. ದೇವಾಲಯಗಳಲ್ಲಿ ವಾದ್ಯಗಾರರಾಗಿ, ದೇವಾಲಯದ ಪರಿಚಾರಿಕೆಯಲ್ಲಿ ತೊಡಗಿಸಿಕೊಂಡಿದ್ದ ದೇವಾಡಿಗರು ಜೀವನೋಪಾಯಕ್ಕಾಗಿ ಕೃಷಿಯನ್ನು ಅವಲಂಬಿಸಿದ್ದರು. ಅನ್ಯ ಸಂಸ್ಕೃತಿಗಳ ಪ್ರಭಾವ, ನಗರೀಕರಣ, ಔದ್ಯೋಗೀಕರಣ ಮುಂತಾದ ಹಲವು ಅಡೆತಡೆಗಳಿದ್ದರೂ ತುಳುನಾಡಿನ ದೇವಾಡಿಗ ಸಮುದಾಯವು ತನ್ನ ಅನನ್ಯತೆಯನ್ನು ಉಳಿಸಿಕೊಂಡು ಬಂದಿದೆ. ತಮ್ಮ ಕುಲಕಸುಬನ್ನು ನಿರ್ವಹಿಸುವ ಕಾಯಕವನ್ನು ವರ್ಷಾವಧಿಯ ಜಾತ್ರಾಮಹೋತ್ಸವಗಳಲ್ಲಿ ದೇವಸ್ಥಾನಗಳಲ್ಲಿ ಪೂಜಾಕಾರ್ಯಗಳಲ್ಲಿ ತೊಡಗಿಸಿಕೊಂಡು ಅದನ್ನು ಉಳಿಸುವ ಪ್ರಯತ್ನ ಮಾಡುತ್ತಿದೆ. ದೇವಸ್ಥಾನಗಳಲ್ಲಿ ಆಧುನಿಕ ಸ್ವಯಂ ವಿದ್ಯುತ್ಚಾಲಿತ ವಾದ್ಯಪರಿಕರಗಳು ಬಂದರೂ ತಮ್ಮ ಸೇವಾಧರ್ಮ ಮತ್ತು ಕುಲಕಸುಬಿನ ಆಚರಣೆಗೆ ಅನುಗುಣವಾಗಿ ದೇವಾಡಿಗ ಸಮುದಾಯದವರು ದೇವಸ್ಥಾನದ ಪರಿಚಾರಿಕೆಯ ಜೊತೆಗೆ ವಾದ್ಯಪರಿಕರಗಳನ್ನು ನುಡಿಸುತ್ತಾರೆ. ಆ ಮೂಲಕ ತಮ್ಮ ಕುಲಕಸುಬನ್ನು ಉಳಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ದೇವಾಡಿಗ ಸಮುದಾಯವು ವರ್ತಮಾನದಲ್ಲಿ ರಾಜಕೀಯವಾಗಿ, ಶೈಕ್ಷಣಿಕವಾಗಿ, ಆಡಳಿತಾತ್ಮಕವಾಗಿ, ಸಮಾಜಸೇವೆಗಳಲ್ಲಿ ತೊಡಗಿಸಿಕೊಂಡು ಸಮುದಾಯವನ್ನು ಗುರುತಿಸುವ ಪ್ರಯತ್ನವನ್ನು ಮಾಡುತ್ತಿದೆ. ಸಮುದಾಯ ಸಂಘಗಳನ್ನು ಸ್ಥಾಪಿಸಿ, ಸಾಮಾಜಿಕ ಸೇವೆಗಳ ಜೊತೆಗೆ ಸಮುದಾಯದ ಜನರ ಉನ್ನತಿಗಾಗಿ ಕೆಲಸಗಳನ್ನು ಮಾಡುತ್ತಿದೆ.

ಯಾವ ಸಮುದಾಯವೂ, ಯಾವ ಸಂಸ್ಕೃತಿಯೂ ಕಾಲಕ್ಕೆ ಅಂಟಿಕೊಂಡು ಇರಲು ಸಾಧ್ಯವಿಲ್ಲ. ಬದಲಾದ ಕಾಲಗತಿಯೊಂದಿಗೆ ಬಲವಾದ ಭರವಸೆಗಳೊಂದಿಗೆ ಹೆಜ್ಜೆ ಹಾಕಬೇಕಾದ ಅನಿವಾರ್ಯತೆ ಎಲ್ಲಾ ಸಮುದಾಯಗಳಿಗೂ ಇದೆ. ಒಂದು ಸಂಸ್ಕೃತಿಯ ಬಲವೆಂದರೆ ಬದಲಾಗಲು ಮತ್ತು ಬೆಳೆಯಲು ಅದಕ್ಕಿರುವ ಸಮ್ಮತಿ ಮತ್ತು ಶಕ್ತಿ. ಸದಾ ರಚಿಸಿಕೊಳ್ಳುತ್ತಾ ಒಂದು ಸಂಸ್ಕೃತಿ ಬೆಳೆಯುತ್ತದೆ. ಶಕ್ತಿಶಾಲಿ ಮತ್ತು ಸ್ಥಿತಿಸ್ಥಾಪಕವಾಗಿದ್ದರೆ

ಸಮುದಾಯವು ಕೂಡಾ ಬೆಳೆಯುತ್ತದೆ. ಪರಂಪರಾಗತವಾದ ವೃತ್ತಿಯ ಜೊತೆಗೆ ಆಧುನಿಕ ಕಾಲಘಟ್ಟದಲ್ಲಿ ಬದಲಾಗುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಸಂದರ್ಭಕ್ಕೆ ಅನುಗುಣವಾಗಿ ಮುನ್ನುಗ್ಗಬೇಕಾದ ತುರ್ತು ದೇವಾಡಿಗ ಸಮುದಾಯಕ್ಕಿದೆ. ಕಡಿಮೆ ಜನಸಂಖ್ಯೆಯ ದೇವಾಡಿಗರು ಎಲ್ಲಾ ಕ್ಷೇತ್ರಗಳಲ್ಲೂ ಸ್ಪರ್ಧಿಸುವ ಮೂಲಕ ಸಮಾಜದಲ್ಲಿ ಮನ್ನಡೆಯಬೇಕಾದ ಸವಾಲು ಇದೆ.

**ಪರಾಮರ್ಶನ ಗ್ರಂಥಗಳು**


- ಆಶಾಲತಾ. (2010). *ತುಳುನಾಡಿನ ಬಳಿ ಪದ್ಧತಿ: ಸ್ವರೂಪ ಮತ್ತು ಆನ್ವಯಿಕತೆ.* ಮಂಗಳೂರು ವಿಶ್ವವಿದ್ಯಾನಿಲಯ
- ಎಡ್ಗರ್ ಥರ್ಸ್ಟನ್. (1909). *ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ.* ಮದ್ರಾಸ್ ಗೌವರ್ನಮೆಂಟ್ ಪ್ರೆಸ್.
- ಇಂದಿರಾ ಹೆಗ್ಗಡೆ. (2004). *ಬಂಟರು–ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ.* ಕನ್ನಡ ಪುಸ್ತಕ ಪ್ರಾಧಿಕಾರ.
- ಗುರುರಾಜ್ ಭಟ್ ಪಿ. (1969). ಅಂಟಿಕ್ಯೂಟಿಸ್ ಆಫ್ ಸೌತ್‌ಕೆನಾರ. ಪ್ರಭಾಕರ ಪ್ರೆಸ್.
- ಮರುಳಸಿದ್ದಪ್ಪ, ಕೆ. (ಪ್ರ.ಸಂ.)., ಬಂಜಗೆರೆ ಜಯಪ್ರಕಾಶ (ಸಂ.) (2019). *ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟುಗಳು (ಸಂಪುಟ–ಎರಡು).* ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
- ಪಾದೂರು ಗುರುರಾಜ ಭಟ್. (2009). *ತುಳುನಾಡು.* ಪಿ. ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್.
- ರೀನಾ ಟಿ.ಬಿ. (2016). *ಕುಲಕಸುಬುಗಳು ಮತ್ತು ಜನ ಬದುಕು.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ರೆವರೆಂಡ್ ಕಿಟ್ಟೆಲ್. (1969). *ಕನ್ನಡ ಇಂಗ್ಲಿಷ್ ನಿಘಂಟು (ಸಂಪುಟ–ಎರಡು).*
- ಸುರೇಖ ಹೇಮನಾಥ ದೇವಾಡಿಗ. (2019). *ದೇವಾಡಿಗ ಜನಾಂಗ ಒಂದು ಸಾಂಸ್ಕೃತಿಕ ಅಧ್ಯಯನ.* ಅಭಿಜಿತ್ ಪ್ರಕಾಶನ.
- ಉಪಾಧ್ಯಾಯ, ಯು.ಪಿ. (1988). *ತುಳು ನಿಘಂಟು (ಸಂಪುಟ–ನಾಲ್ಕು).*